**All India Radio: Bangalore**
**National Bulletin In Kannada**
**23.06.2025 / 1.10 pm**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**23.06.2025 / 1.10 pm**

**<><*<><>*><>**

ಮುಖ್ಯಾಂಶಗಳು

೧. ಇಸ್ರೇಲ್-ಇರಾನ್ ಸಂಘರ್ಷ ಮುಂದುವರಿಕೆ ; ತೈಲಬೆಲೆ ಐದು ತಿಂಗಳ ಗರಿಷ್ಠಕ್ಕೆ ಏರಿಕೆ

೨. ಆಪರೇಷನ್ ಸಿಂಧು ಅಡಿ ಇರಾನ್-ಇಸ್ರೇಲ್‌ನಿಂದ ೧ ಸಾವಿರದ ೭೦೦ಕ್ಕೂ ಅಧಿಕ ಭಾರತೀಯರ ಸ್ಥಳಾಂತರ

೩. ಕನಿಷ್ಕ್ ಬಾಂಬ್ ದಾಳಿಗೆ ೪೦ ವರ್ಷ ; ಸಚಿವ ಹರ್ದಿಪ್ ಸಿಂಗ್ ಪುರಿ ನಿಯೋಗದಿಂದ ಐರ್ಲ್ಯಾಂಡ್‌ನಲ್ಲಿ ಸಂತ್ರಸ್ತರಿಗೆ ಗೌರವ ನಮನ

೪. ಭಾರತ-ಇಂಗ್ಲೆಂಡ್ ಟೆಸ್ಟ್ ಕ್ರಿಕೆಟ್ ; ೪ನೇ ದಿನದಾಟದಲ್ಲಿಂದು ೨ನೇ ಇನ್ನಿಂಗ್ಸ್ ಮುಂದುವರೆಸಲಿರುವ ಭಾರತ

><><><><><><><

ಇರಾನ್-ಇಸ್ರೇಲ್ ನಡುವಿನ ಸಂಘರ್ಷ ಮುಂದುವರೆದಿದ್ದು, ಉಭಯ ರಾಷ್ಟ್ರಗಳ ನಡುವೆ ಪರಸ್ಪರ ಕ್ಷಿಪಣಿ ದಾಳಿಗಳ ನಡುವೆ, ಪ್ರಾದೇಶಿಕ ಉದ್ವಿಘ್ನತೆ ತೀವ್ರಗೊಂಡಿದೆ. ಅಮೆರಿಕ ದಾಳಿ ಬಳಿಕ ಮೊದಲ ಬಾರಿಗೆ ಹೇಳಿಕೆ ನೀಡಿರುವ ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಇಸ್ರೇಲ್‌ಗೆ ಧಿಟ್ಟ ಉತ್ತರ ನೀಡುವುದನ್ನು ಮುಂದುವರೆಸಲಾಗುವುದು. ಇರಾನ್ ವಿರುದ್ಧ ಸಮರ ಸಾರಿ ಇಸ್ರೇಲ್ ದೊಡ್ಡ ತಪ್ಪು ಮಾಡಿದೆ ಎಂದು ಹೇಳಿದ್ದಾರೆ. ಇದಕ್ಕೂ ಮುನ್ನ ಇರಾನ್‌ನ ಪರಮಣು ತಾಣಗಳ ಮೇಲೆ ಅಮೆರಿಕದ ದಾಳಿ ಬೆನ್ನಲ್ಲೇ ವಿಶ್ವದ ಅತ್ಯಂತ ನಿರ್ಣಾಯಕ ಕಾರಿಡಾರ್ ಹೊರ್ಮುಜ್ ಜಲಸಂಧಿಯನ್ನು ಮುಚ್ಚಲು ಇರಾನ್ ಸಂಸತ್ ಒಪ್ಪಿಗೆ ನೀಡಿತ್ತು. ಆದರೂ ಇರಾನ್‌ನ ರಾಷ್ಟ್ರೀಯ ಭದ್ರತಾ ಮಂಡಳಿ ಈ ಕುರಿತಂತೆ ಅಂತಿಮ ನಿರ್ಧಾರ ಕೈಗೊಳ್ಳಲಿದೆ. ಭಾರತಕ್ಕೂ ಈ ಜಲಸಂಧಿಯ

ಮೂಲಕ ಶೇಕಡ ೪೦ರಷ್ಟು ತೈಲ ಆಮದಾಗುತ್ತದೆ. ಆದರೆ ಭಾರತಕ್ಕೆ ಕತಾರ್ ಕೂಡ ಪ್ರಮುಖ ಅನಿಲ ಪೂರೈಕೆದರ ರಾಷ್ಟ್ರವಾಗಿದ್ದು, ಅದು ಈ ಜಲಸಂಧಿಯನ್ನು ಬಳಸುವುದಿಲ್ಲ. ಹಾಗಾಗಿ ಭಾರತಕ್ಕೆ ದೊಡ್ಡಮಟ್ಟದ ಪರಿಣಾಮವಿಲ್ಲ ಎಂದು ಹೇಳಲಾಗುತ್ತಿದೆ.  ಈ ನಡುವೆ ಇರಾನ್ ಸೇನೆ ಅಮೆರಿಕ ದಾಳಿಗೆ ಪ್ರತಿಕ್ರಿಯೆಯಾಗಿ ತನ್ನ ಕಾರ್ಯಚರಣೆಯ ಸಮಯ, ಸ್ವರೂಪ ಮತ್ತು ಪ್ರಮಾಣವನ್ನು ನಿರ್ಧರಿಸುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

><><><><><><><

ಇರಾನ್ ಪರಮಾಣು ಸೌಲಭ್ಯಗಳ ಮೇಲೆ ಅಮೆರಿಕ ನಡೆಸಿದ ದಾಳಿ ಹಾಗೂ ಇರಾನ್ ಸಂಸತ್ತಿನ ಹೊರ್ಮುಜ್ ಜಲಸಂಧಿಯನ್ನು ಮುಚ್ಚುವ ನಿರ್ಧಾರದ ಬೆನ್ನಲ್ಲೇ ತೈಲ ಬೆಲೆಗಳು ೫ ತಿಂಗಳ ಗರಿಷ್ಠಕ್ಕೆ ಏರಿಕೆಯಾಗಿದೆ. ಬ್ರೆಂಟ್‌ಕ್ರೂಡ್ ಕಚ್ಚಾತೈಲ ಶೇಕಡ ೨ರಷ್ಟು ಬೆಲೆ ಏರಿಕೆ ಕಂಡು ಪ್ರತಿ ಬ್ಯಾರಲ್‌ಗೆ ೭೯ ಡಾಲರ್‌ಗಿಂತ ಹೆಚ್ಚಾಗಿದೆ. ಇನ್ನು ಡಬ್ಲ್ಯೂಕೆಐ ಕ್ರೂಡ್ ಕಚ್ಚಾತೈಲ ಕೂಡ ೨ ಪ್ರತಿಶತ ಏರಿಕೆ ಕಂಡು ಸುಮಾರು ಪ್ರತಿ ಬ್ಯಾರಲ್‌ಗೆ ೭೫ ಡಾಲರ್‌ನಲ್ಲಿ ವಹಿವಾಟು ನಡೆಸಿದೆ. ಒಟ್ಟಾರೆಯಾಗಿ ಬ್ರೆಂಟ್‌ಕ್ರೂಡ್ ಬೆಲೆಯಲ್ಲಿ ಶೇಕಡ ೫ರಷ್ಟು ಹೆಚ್ಚಳವಾಗಿದೆ. ಜಾಗತಿಕ ರಾಜಕೀಯ ಉದ್ವಿಗ್ನ ಪರಿಸ್ಥಿತಿ ನಡುವೆ ಸತತ ಮೂರನೇ ವಾರ ಕಚ್ಚಾತೈಲ ಬೆಲೆ ಏರಿಕೆಯಾಗಿದೆ. ಇನ್ನೂ ಅನುಷ್ಠಾನಗೊಳ್ಳದಿದ್ದರೂ ಜಗತ್ತಿನ ಅತಿ ನಿರ್ಣಾಯಕ ತೈಲ ಮತ್ತು ಅನಿಲ ಕಾರಿಡಾರ್, ಹೊರ್ಮುಜ್ ಜಲಸಂಧಿಯ ಮುಚ್ಚುವಿಕೆ ಜಾಗತಿಕ ಆರ್ಥಿಕತೆಯ ಮೇಲೆ ಅತ್ಯಧಿಕ ಪ್ರಭಾವ ಬೀರಬಹುದಾದ ಸಾಧ್ಯತೆಯಿದೆ. ಕಳೆದ ಜನವರಿಯಿಂದ ಈವರೆಗಿನ ಅತ್ಯಧಿಕ ಬೆಲೆ ಏರಿಕೆ ಇದಾಗಿದೆ.

><><><><><><><

ಅಮೆರಿಕದಲ್ಲೂ ಮಿಲಿಟರಿ ಅಧಿಕಾರಿಗಳು ಉದ್ವಿಘ್ನ ಪ್ರದೇಶದಾದ್ಯಂತ ಪಡೆಯಗಳನ್ನು ನಿಯೋಜಿಸಿದ್ದು, ಹೈಅಲರ್ಟ್‌ನಲ್ಲಿರಿಸಿದೆ. ಈ ನಡುವೆ ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಹಾಗೂ ಇತರ ಹಿರಿಯ ಅಧಿಕಾರಿಗಳೊಂದಿಗೆ, ಅಮೆರಿಕದ ಸೈನಿಕ ದಾಳಿಯ ನಂತರ ಉಂಟಾಗಿರುವ ಪ್ರಾದೇಶಿಕ ಹಾಗೂ ಅಂತಾರಾಷ್ಟ್ರೀಯ ಬೆಳವಣಿಗೆಗಳ ಬಗ್ಗೆ ಸಮಾಲೋಚನೆ ನಡೆಸಲು ಮಾಸ್ಕೋಗೆ ಆಗಮಿಸಿದ್ದಾರೆ. ಮತ್ತೊಂದೆಡೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್‌ನಲ್ಲಿ ನಾಯಕತ್ವ ಬದಲಾವಣೆಯ ಸಂಭಾವ್ಯತೆ

ಕುರಿತಂತೆ ಮಾತನಾಡಿದ್ದು, ಪ್ರಸ್ತುತ ಇರುವ ನಾಯಕತ್ವ ಇರಾನ್‌ನ ವೈಭವವನ್ನು ಮರುಕಳುಹಿಸುವಂತೆ ಮಾಡಲು ಸಾಧ್ಯವಾಗದಿದ್ದರೆ ಅಲ್ಲಿ ನಾಯಕತ್ವದ ಬದಲಾವಣೆಯಾಗಬೇಕು ಎಂದಿದ್ದಾರೆ.

><><><><><><

ಪಶ್ಚಿಮ ಏಷ್ಯಾದ ಉದ್ವಿಘ್ನ ಪರಿಸ್ಥಿತಿ ನಡುವೆ ಇರಾನ್-ಇಸ್ರೇಲ್‌ನಲ್ಲಿರುವ ಭಾರತೀಯರನ್ನು ಆಪರೇಷನ್ ಸಿಂಧು ಅಡಿಯಲ್ಲಿ ಭಾರತ ದೊಡ್ಡ ವ್ಯಾಪ್ತಿಯ ಸ್ಥಳಾಂತರ ಕಾರ್ಯಚರಣೆಯನ್ನು ಮುಂದುವರೆಸಿದೆ. ವಿದೇಶಾಂಗ ವ್ಯವಹಾರಗಳ ಖಾತೆ ರಾಜ್ಯ ಸಚಿವ ಪಬಿತ್ರ ಮಾರ್ಗರಿಟಾ ಅವರು ಇರಾನ್‌ನ ಮಷ್ಹದ್‌ನಿಂದ ವಿಶೇಷ ವಿಮಾನದ ಮೂಲಕ ಕಳೆದ ರಾತ್ರಿ ನವದೆಹಲಿಗೆ ಆಗಮಿಸಿದ ೨೮೫ ಭಾರತೀಯರನ್ನು ಸ್ವಾಗತಿಸಿದರು. ಈವರೆಗೆ “ಆಪರೇಶನ್ ಸಿಂಧು” ಅಡಿಯಲ್ಲಿ ಒಟ್ಟು ೧ ಸಾವಿರದ ೭೧೩ ಭಾರತೀಯರನ್ನು ಇರಾನ್‌ನಿಂದ ಸುರಕ್ಷಿತವಾಗಿ ಸ್ಥಳಾಂತರಿಸಲಾಗಿದೆ. ಮುಂದಿನ ಎರಡು ದಿನಗಳಲ್ಲಿ ಇರಾನಿನಿಂದ ಇನ್ನು ೨ ರಿಂದ ೩ ವಿಮಾನಗಳು ಭಾರತಕ್ಕೆ ಆಗಮಿಸಲಿವೆ. ಸಂಬಂಧಿತ ಬೆಳವಣಿಗೆಯಲ್ಲಿ ಇಸ್ರೇಲ್ ವಾಯುಪ್ರದೇಶ ಮುಚ್ಚಲ್ಪಟ್ಟ ಮತ್ತು ವಾಣಿಜ್ಯ ವಿಮಾನಗಳ ಸಂಚಾರ ಸ್ಥಗಿತಗೊಂಡ ನಂತರ ಇಸ್ರೇಲ್ ಮತ್ತು ಜೋಡಾನ್‌ನಲ್ಲಿರುವ ಭಾರತೀಯ ರಾಯಭಾರಿ ಕಚೇರಿ ಜಂಟಿ ಪ್ರಯತ್ನದಲ್ಲಿ ೧೬೦ ಭಾರತೀಯರನ್ನು ಸ್ಥಳಾಂತರಿಸಿದೆ. ಈ ಆಪರೇಶನ್ ಸಿಂಧು ಭಾಗವಾಗಿ, ಇರಾನ್‌ನಲ್ಲಿರುವ ಭಾರತೀಯ ರಾಯಭಾರಿ ಕಚೇರಿ ಭಾರತೀಯ ನಾಗರಿಕರನ್ನು ಹೆಚ್ಚು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸಲು ಸಹಾಯ ಮಾಡುತ್ತಿದೆ.

><><><><><><

ಭೀಕರ ಕನಿಷ್ಕ ಬಾಂಬ್ ದಾಳಿಯಾಗಿ ಇಂದಿಗೆ ೪೦ ವರ್ಷಗಳು ಕಳೆದಿರುವ ಹಿನ್ನಲೆಯಲ್ಲಿ ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್, ದಾಳಿಯಲ್ಲಿ ಪ್ರಾಣ ಕಳೆದುಕೊಂಡವರಿಗೆ ಗೌರವ ಸಲ್ಲಿಸಿದರು, ಕನಿಷ್ಕ ಬಾಂಬ್ ದಾಳಿಯು ಭಯೋತ್ಪಾದನೆಯ ಅತ್ಯಂತ ಭೀಕರ ದುಷ್ಕೃತ್ಯಗಳಲ್ಲಿ ಒಂದಾಗಿದೆ ಎಂದು ಅವರು ಹೇಳಿದ್ದಾರೆ. ೧೯೮೫ ರ ಈ ದಿನ, ಕೆನಡಾದ ಮಾಂಟ್ರಿಯಲ್‌ನಿಂದ ಲಂಡನ್ ಮೂಲಕ ನವದೆಹಲಿಗೆ ಪ್ರಯಾಣ ಬೆಳೆಸಿದ್ದ ಏರ್ ಇಂಡಿಯಾ ವಿಮಾನ ೧೮೨, ಕೆನಡಾ ಮೂಲದ ಖಲಿಸ್ತಾನಿ ಭಯೋತ್ಪಾದಕರು ನಡೆಸಿದ ಭಯೋತ್ಪಾದನಾ ಕೃತ್ಯದ ಪರಿಣಾಮವಾಗಿ

ಐರ್ಲೆಂಡ್ ಕರಾವಳಿಯ ಆಚೆ ಅಟ್ಲಾಂಟಿಕ್ ಸಾಗರದ ಮೇಲೆ ಆಗಸದಲ್ಲಿ ಸ್ಫೋಟಗೊಂಡಿತು. ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್‌ಸಿಂಗ್ ಪುರಿ ನೇತೃತ್ವದ ನಿಯೋಗ ಇಂದು ಐರ್ಲ್ಯಾಂಡ್ ಪ್ರಧಾನಿ ಮೈಕಲ್ ಮಾರ್ಟಿನ್ ಮತ್ತು ಕೆನಡಾ ಸಾರ್ವಜನಿಕ ಸುರಕ್ಷತ ಸಚಿವರೊಂದಿಗೆ ಕಾರ್ಕ್‌ನಲ್ಲಿರುವ ಅಹಕಿಸ್ತಾ ಸ್ಮಾರಕದ ಬಳಿ ನಡೆಯುವ ಕಾರ್ಯಕ್ರಮದಲ್ಲಿ ಸಂತ್ರಸ್ಥರಿಗೆ ಗೌರವ ನಮನ ಸಲ್ಲಿಸಲಿದ್ದಾರೆ. ಭಾರತೀಯ ನಿಯೋಗದಲ್ಲಿ ಬಿಜೆಪಿ ನಾಯಕ ತರುಣ್ ಚುಗ್ ಮತ್ತು ವಿವಿಧ ರಾಜ್ಯಗಳ ಶಾಸಕರು ಸೇರಿದ್ದಾರೆ.

><><><><><><

ರಾಜಕೀಯ ಧುರೀಣ, ಭಾರತೀಯ ಜನ ಸಂಘದ ಸಂಸ್ಥಾಪಕರಲ್ಲಿ ಒಬ್ಬರಾದ ಡಾ. ಶ್ಯಾಮ್ ಪ್ರಸಾದ್ ಮುಖರ್ಜಿಯವರ ಪುಣ್ಯಸ್ಮರಣೆ ದಿನವಾದ ಇಂದು ಅವರಿಗೆ ಪ್ರಧಾನಿ ನರೇಂದ್ರ ಮೋದಿ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಸೇರಿದಂತೆ ಹಲವು ಗಣ್ಯರು ಗೌರವ ನಮನ ಸಲ್ಲಿಸಿದ್ದಾರೆ. ಸಾಮಾಜಿಕ ಮಾಧ್ಯಮ ಸಂದೇಶದಲ್ಲಿ ಪ್ರಧಾನಿ, ಡಾ. ಮುಖರ್ಜಿಯವರು ದೇಶದ ಸಮಗ್ರತೆಯನ್ನು ಕಾಪಾಡಲು ಅಸಮಾನ್ಯ ಧೈರ್ಯ ಮತ್ತು ಸಾಮರ್ಥ್ಯವನ್ನು ತೋರಿದರು. ರಾಷ್ಟ್ರ ನಿರ್ಮಾಣದಲ್ಲಿ ಅವರು ಅತ್ಯಮೂಲ್ಯ ಕೊಡುಗೆಯನ್ನು ಇಂದಿಗೂ ಗೌರವದಿಂದ ಸ್ಮರಿಸಲಾಗುತ್ತದೆ ಎಂದು ಹೇಳಿದ್ದಾರೆ.

><><><><><><

## ವಿಶೇಷ ವರದಿ

><><><><><><

*ಕಳೆದ ಒಂದು ದಶಕದಲ್ಲಿ ಭಾರತ ಸರ್ವತೋಮುಖವಾಗಿ ಗಮನಾರ್ಹ ಬದಲಾವಣೆಯನ್ನು ಕಂಡಿದ್ದು, ಸೇವೆ, ಸುಶಾಸನ ಮತ್ತು ಬಡವರ ಕಲ್ಯಾಣದ ತತ್ವದಡಿ ಮುನ್ನಡೆಯುತ್ತಿದೆ. ಕೇಂದ್ರ ಸರ್ಕಾರ ಕಳೆದ ೧೧ ವರ್ಷಗಳಲ್ಲಿ ಕೈಗೊಂಡಿರುವ ಹಲವು ಪ್ರಮುಖ ಪ್ರಯತ್ನಗಳ ಕುರಿತು ಆಕಾಶವಾಣಿ ಸುದ್ದಿ ವಿಭಾಗ ವಿಶೇಷ ವರದಿಯನ್ನು ಪ್ರಸಾರ ಮಾಡುತ್ತಿದೆ. ಈ ಮಾಲಿಕೆಯಲ್ಲಿಂದು, ದೇಶದ ಅಲ್ಪ ಸಂಖ್ಯಾತ ಸಮುದಾಯಗಳ, ಸಬಲೀಕರಣ ಅವಕಾಶ ಮತ್ತು ಪರಿವರ್ತನೆಯೆಡೆಗಿನ ಪಯಣದ ಕುರಿತ ಒಂದು ವರದಿ ಇಲ್ಲಿದೆ. ಕಳೆದ ದಶಕದಲ್ಲಿ ಶಿಕ್ಷಣ, ಆರ್ಥಿಕ ಸಬಲೀಕರಣ ಮತ್ತು*

*ಮೂಲಸೌಕರ್ಯ ಅಭಿವೃದ್ಧಿಯಂತಹ ಪ್ರಮುಖ ಕ್ಷೇತ್ರಗಳನ್ನು ಕೇಂದ್ರೀಕರಿಸಿ ಕೈಗೊಂಡ ಕ್ರಮಗಳ ಮೂಲಕ ಅಲ್ಪಸಂಖ್ಯಾತ ಸಮುದಾಯಗಳ ಏಳಿಗೆಗೆ ಸರ್ಕಾರ ಮಹತ್ವದ ಹೆಜ್ಜೆಗಳನ್ನಿಟ್ಟಿದೆ. ಪ್ರಧಾನಮಂತ್ರಿ ಜನ ವಿಕಾಸ್ ಕಾರ್ಯಕ್ರಮದ ಮೂಲಕ ಮಾತ್ರವೇ ೧೮ ಸಾವಿರದ ೪೦೦ ಕೋಟಿ ರೂಪಾಯಿ ಮೌಲ್ಯದ ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. ಅದೇ ಸಮಯದಲ್ಲಿ, ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ಹಣಕಾಸು ನಿಗಮವು ೭೫೨ ಕೋಟಿ ರೂಪಾಯಿಯಷ್ಟು ಅನುದಾನವನ್ನು ೧ ಲಕ್ಷದ ೭೪ ಸಾವಿರಕ್ಕೂ ಹೆಚ್ಚು ಫಲಾನುಭವಿಗಳಿಗೆ ನೀಡಿದೆ ಹಾಗೂ ಹಿಂದುಳಿದ ವರ್ಗಗಳಿಗೆ ರಿಯಾಯಿತಿ ದರದಲ್ಲಿ ಸಾಲವನ್ನು ಒದಗಿಸಿದೆ. ಹಜ್ ಸುವಿಧಾ ಆಪ್ ಹಾಗೂ ಹಜ್ ಸೇವಕರಿಗಾಗಿ ವಿಶೇಷ ತರಬೇತಿ ಕಾರ್ಯಕ್ರಮಗಳು ತೀರ್ಥಯಾತ್ರೆಯ ಅನುಭವವನ್ನು ಸುಧಾರಿಸಿವೆ. ಪಾರದರ್ಶಕತೆ ಮತ್ತು ಸುಶಾಸನವನ್ನು ಬಲಪಡಿಸಲು, ಐತಿಹಾಸಿಕ ವಕ್ಫ್ ತಿದ್ದುಪಡಿ ಕಾಯ್ದೆ ೨೦೨೫ನ್ನು ಜಾರಿಗೆ ತರುವ ಮೂಲಕ, ಉಮೀದ್ ಪೋರ್ಟಲ್ ಅನ್ನು ಆರಂಭಿಸಿ ವಕ್ಫ್ ಆಸ್ತಿಗಳ ಡಿಜಿಟಲ್ ನಿರ್ವಹಣೆಗೆ ಹೊಸ ಯುಗಕ್ಕೆ ದಾರಿ ಮಾಡಿಕೊಡಲಾಗಿದೆ. ಇದಲ್ಲದೆ, ಬೌದ್ಧ ಅಭಿವೃದ್ಧಿ ಯೋಜನೆ, ಜಿಯೋ ಪಾರ್ಸಿ, ಇತ್ಯಾದಿ ಯೋಜನೆಗಳು ವಿಭಿನ್ನ ಸಮುದಾಯಗಳ ಸಾಂಸ್ಕೃತಿಕ, ಶೈಕ್ಷಣಿಕ ಉತ್ತೇಜನೆಗೆ ಮತ್ತು ಸಮುದಾಯ ಕಲ್ಯಾಣಕ್ಕೆ ಕೊಡುಗೆ ನೀಡಿವೆ.*

><><><><><><

ಸಿರಿಯಾದ ರಾಜಧಾನಿ ಡಮಾಸ್ಕಸ್‌ನ ಮಾರ್‌ಎಲಿಯಾಸ್ ಚರ್ಚ್‌ನಲ್ಲಿ ಸಂಭವಿಸಿದ ಭೀಕರ ಆತ್ಮಾಹುತಿ ದಾಳಿಯಲ್ಲಿ ಕನಿಷ್ಕ ೧೯ ಮಂದಿ ಮೃತಪಟ್ಟು ಹಲವರು ಗಾಯಗೊಂಡಿರುವ ಘಟನೆ ವರದಿಯಾಗಿದೆ. ನಿನ್ನೆ ಚರ್ಚ್‌ನಲ್ಲಿ ಧಾರ್ಮಿಕ ಸಭೆ ನಡೆಯುತ್ತಿದ್ದ ವೇಳೆ ಆತ್ಮಾಹುತಿದಾಳಿಕೋರ ಒಳ ನುಗ್ಗಿ ಜನರ ಮೇಲೆ ಗುಂಡು ಹಾರಿಸಿ ತನ್ನ ದೇಹದ ಮೇಲಿದ್ದ ಬಾಂಬನ್ನು ಸಿಡಿಸಿಕೊಂಡಿದ್ದಾನೆ. ಕಳೆದ ಡಿಸೆಂಬರ್‌ನಲ್ಲಿ ಬಷಾರ್ ಅಲ್ ಅಸಾದ್ ನೇತೃತ್ವದ ಸರ್ಕಾರ ಪತನಗೊಂಡ ನಂತರ ಡಮಾಸ್ಕಸ್‌ನಲ್ಲಿ ನಡೆದ ಮೊದಲ ಆತ್ಮಾಹುತಿ ದಾಳಿಯಾಗಿದೆ.

><><><><><><

ಲೀಡ್ಸ್‌ನ ಹೆಡಿಂಗ್ಲಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಆಂಡರ್ಸನ್-ತೆಂಡೂಲ್ಕರ್ ಕ್ರಿಕೆಟ್ ಟ್ರೋಫಿಯ ೪ನೇ ದಿನದಾಟದಲ್ಲಿ ಇಂದು, ಭಾರತ ತಂಡವು ೯೬ ರನ್‌ಗಳ ಮುನ್ನಡೆಯೊಂದಿಗೆ ಎರಡನೇ

ಇನ್ನಿಂಗ್ಸ್ ಅನ್ನು ಪುನರಾರಂಭಿಸಲಿದೆ. ಮಳೆಯಿಂದಾಗಿ ಕಡಿತಗೊಂಡ ಮೂರನೇ ದಿನದಾಟದ ಅಂತ್ಯಕ್ಕೆ ಭಾರತ ೨ ವಿಕೆಟ್‌ಗೆ ೯೦ ರನ್ ಗಳಿಸಿತ್ತು, ಕೆಎಲ್ ರಾಹುಲ್ ೪೭ ರನ್‌ಗಳೊಂದಿಗೆ ಮತ್ತು ನಾಯಕ ಶುಭ್‌ಮನ್ ಗಿಲ್ ೬ ರನ್‌ಗಳೊಂದಿಗೆ ಬ್ಯಾಟಿಂಗ್ ಮಾಡುತ್ತಿದ್ದರು.

><><><><><><

ಸ್ಕ್ವಾಷ್‌ನಲ್ಲಿ, ಅನಾಹತ್ ಸಿಂಗ್ ಮತ್ತು ಅಭಯ್ ಸಿಂಗ್ ಅವರು ಮಲೇಷ್ಯಾದ ಜೋಹೋರ್‌ನಲ್ಲಿರುವ ಅರೆನಾ ಎಮಾಸ್‌ನಲ್ಲಿ ಇಂದು ಆರಂಭವಾಗಲಿರುವ ಏಷ್ಯನ್ ಸ್ಕ್ವಾಷ್ ಡಬಲ್ಸ್ ಚಾಂಪಿಯನ್‌ಶಿಪ್ ೨೦೨೫ ರಲ್ಲಿ ಭಾರತೀಯ ಸವಾಲನ್ನು ಮುನ್ನಡೆಸಲಿದ್ದಾರೆ.

><><><><><><